Civil.Misc.3/2017
ಪಿ.ಡಬ್ಲ್ಯು: 01(Girijamma)

ದಿನಾಂಕಃ 22.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯವಿಚಾರಣೆ ಅರ್ಜಿದಾರರ ಪರ – ಎನ್.ಕೆ.ಎಸ್. ವಕೀಲರಿಂದ.**

ನಾನು ನನ್ನ ಅರ್ಜಿಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

1. 2018 ನೇ ಸಾಲಿನ ಮತದಾರರ ಪಟ್ಟಿಯ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದರಲ್ಲಿ ನನ್ನ ಹಾಗೂ ನನ್ನ ಗಂಡನ ಹೆಸರು ಕಾಣಿಸುತ್ತಿದ್ದು. ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

2. ನನ್ನ ಮತದಾರರ ಗುರುತಿನ ಚೀಟಿಯ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

3. ನನ್ನ ಗಂಡನ ಮತದಾರರ ಗುರುತಿನ ಚೀಟಿಯ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

4. ನನ್ನ ಗಂಡನ ಆಧಾರ ಗುರುತಿನ ಚೀಟಿಯ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

5. ನನ್ನ ಆಧಾರ ಗುರುತಿನ ಚೀಟಿಯ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

6. ನನ್ನ ಕುಟುಂಬದ 2 ಪಡಿತರ ಚೀಟಿಯ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

7. ನನ್ನ ಗಂಡನ ಅಂಚೆ ಇಲಾಖೆಯ ಉಳಿತಾಯ ಪುಸ್ತಕದ ನೋಟರಿ ಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು. (ಮೂಲ ಪ್ರತಿಯೊಂದಿಗೆ ತಾಳೆ ಮಾಡಿ ಹಿಂದುರುಗಿಸಲಾಯಿತು).

ಸದರಿ ನಿಪಿ-1 ರಿಂದ 7 ದಾಖಲಾತಿಗಳನ್ನು ಗುರುತಿಸಲು ಎದುರುದಾರರ ವಕೀಲರು ಕೆಲವೊಂದು ದಾಖಲಾತಿಯಲ್ಲಿ ಅರ್ಜಿದಾರ ಹೆಸರು ದಾಸರ ಬಾಲಪ್ಪ ಎಂದು ಇದ್ದು ಕೆಲವೊಂದು ದಾಖಲಾತಿಯಲ್ಲಿ ಸಣ್ಣ ಬಾಲಪ್ಪ ಎಂದು ಇದ್ದು ಅದು ಅರ್ಜಿದಾರರಿಗೆ ಸಂಬಂದ ಇಲ್ಲ ಎಂದು ತಕರಾರು ಮಾಡಿದ್ದು, ಅವುಗಳು ಈ

Civil.Misc.3/2017
ಪಿ.ಡಬ್ಲ್ಯು: 01(Girijamma)

ಅರ್ಜಿಗೆ ಸಂಬಂದ ಪಡುತವೊ ಇಲ್ಲವೊ ಎಂಬುದನ್ನು ಅರ್ಜಿ ಇತ್ಯರ್ಥ ಸಮಯದಲ್ಲಿ ವಿಚಾರಣೆ ಮಾಡಬೇಕಾಗುತ್ತದೆ ಎಂದು ಹೇಳುತ್ತಾ ಸದರಿ ತಕರಾರನ್ನು ಬದಿಗೊತ್ತಲಾಯಿತು).

ಮುಖ್ಯವಿಚಾರಣೆಃ ಮುಕ್ತಾಯ.

**<u>ಪಾಟೀಸವಾಲುಃ ಎದುರುದಾರರ ಪರ ವಕೀಲರಾದ ಎ.ಎಸ್.ಪಿ ರವರಿಂದ</u>**

ನನ್ನ ಗಂಡನ ಹೆಸರು ಬಾಲಪ್ಪ ತಂದೆ ಗಿಡ್ಡಪ್ಪ ಎಂದರೆ ಸರಿ. ಬಾಲಪ್ಪ ದಾಸರ ಎಂದರೆ ಆತ ನನ್ನ ಗಂಡ. ಸಣ್ಣ ಬಾಲಪ್ಪ ಎಂದರೆ ಆತ ನನ್ನ ಗಂಡ. ಸಾಕ್ಷಿ ಮುಂದುವರೆದು ನನ್ನ ಗಂಡನಿಗೆ ಮೂರು ಹೆಸರು ಇದ್ದವು. ಬಾಲಪ್ಪ ದಾಸರ ಎಂದರೆ ಆತ ನನ್ನ ಗಂಡ. ಬಾಲಪ್ಪ ದಾಸರ,ಸಣ್ಣ ಬಾಲಪ್ಪ, ಬಾಲಪ್ಪ ಎಂಬ ಮೂರು ಹೆಸರುಗಳು ನನ್ನ ಆಧಾರ್ ಕಾರ್ಡ್ ನಲ್ಲಿ ನಮೂದು ಆಗಿಲ್ಲ ಎಂದರೆ ಹೌದು.

ಮರು-ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**

**ಕೂಡ್ಲಿಗಿ.**